# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು - 572 103

ಸಂಖ್ಯೆ:ತುವಿ:ಶೈವಿ: SEC:2023-24/1311 ದಿನಾಂಕ:25.06.2024

## :ಪರಿಷ್ಕೃತ ಅಧಿಸೂಚನೆ:

ವಿಷಯ : "ಕಲಿಕೆ ಜೊತೆಗೆ ಕೌಶಲ್ಯ" ಎಂಬ SEC ಪತ್ರಿಕೆಗಳನ್ನು ಅನುಮೋದಿಸಿರುವ ಕುರಿತು.

ಉಲ್ಲೇಖ: 1) ಕರ್ನಾಟಕ ಸರ್ಕಾರ ಕೌಶಲ್ಯಾಭಿವೃದ್ಧಿನಿಗಮ ಇವರ ಇ-ಮೇಲ್ ಪತ್ರ ದಿ:01.03.2024.

2) ವಿವಿ ಅಧಿಸೂಚನೆ ಪತ್ರದ ಸಂಖ್ಯೆ:ತುವಿ:ಶೈವಿ:2023-24/247 ದಿ:06.05.2024.

3) ಸ್ನಾತಕ ವಾಣಿಜ್ಯಶಾಸ್ತ್ರ ಮತ್ತು ಗಣಕ ವಿಜ್ಞಾನ ಅಧ್ಯಯನ ಮಂಡಳಿಗಳ ಪತ್ರಗಳ ದಿ:14.06.2024 & 19.06.2024.

4) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:25.06.2024.

*****

ಮೇಲ್ಕಂಡ ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ, **"ಕಲಿಕೆಯ ಜೊತೆಗೆ ಕೌಶಲ್ಯ"** ಎಂಬ ವಿನೂತನ ಕಾರ್ಯಕ್ರಮದಡಿ ಕೈಗಾರಿಕಾ ಆದ್ಯತಾ ಮತ್ತು ಉದ್ಯಮಶೀಲತಾ ತರಬೇತಿಯನ್ನು ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ನಿಗಮ ಇವರು ವಿನೂತನ ಕಾರ್ಯಕ್ರಮವನ್ನು ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರತಿ ಕಾಲೇಜಿನಲ್ಲಿ ಸ್ನಾತಕ ಪದವಿಯ ಅಂತಿಮ ವರ್ಷದಲ್ಲಿರುವ ಆರನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ SEC ಪತ್ರಿಕೆ ಆಗಿ ಆಯ್ಕೆ ಮಾಡಿಕೊಂಡು ಆಫ್ ಲೈನ್ ಮೂಲಕ ತರಬೇತಿ ನೀಡಿ ಮೌಲ್ಯಮಾಪನ ಕಾರ್ಯವನ್ನು KSDC ವತಿಯಿಂದ ಪೂರ್ಣಗೊಳಿಸಿ ಅಂಕ ಮತ್ತು ಗ್ರೇಡ್‌ಅನ್ನು ನೀಡಲಾಗುವುದೆಂದು ಉಲ್ಲೇಖ (01)ರ ಪತ್ರದಲ್ಲಿ ತಿಳಿಸಲಾಗಿತ್ತು. ವಿಶ್ವವಿದ್ಯಾನಿಲಯವು ರಚಿಸಿರುವ ಅಧ್ಯಯನ ಮಂಡಳಿಗಳು ಸಭೆಯನ್ನು ನಡೆಸಿ, ಉಲ್ಲೇಖ (02)ರಲ್ಲಿ ಅಧಿಸೂಚಿಸಲಾಗಿತ್ತು. KSDC ರವರ ಪತ್ರದನ್ವಯ ಉಲ್ಲೇಖ (03)ರ ಸಭಾ ನಡಾವಳಿಗಳಂತೆ ಪಠ್ಯಕ್ರಮಗಳನ್ನು ಪರಿಷ್ಕರಿಸಿ ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಪಠ್ಯಕ್ರಮವನ್ನು ಅನುಮೋದಿಸಿರುವ ಕುರಿತು ಸಭಾ ನಡಾವಳಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತವೆ.

| ಕ್ರ.ಸಂ | ಅಧ್ಯಯನ ಮಂಡಳಿ | ವಿಷಯ | ಪಠ್ಯಕ್ರಮದ ವಿವರ |
|---|---|---|---|
| 1 | ಸ್ನಾತಕ ವಾಣಿಜ್ಯ ಶಾಸ್ತ್ರ ಅಧ್ಯಯನ ಮಂಡಳಿ | B.Com & BBA ವಿದ್ಯಾರ್ಥಿಗಳಿಗೆ | * GST Accounting<br>* Digital Marketing |
| 2 | ಸ್ನಾತಕ ಗಣಕ ವಿಜ್ಞಾನ ಅಧ್ಯಯನ ಮಂಡಳಿ | B.Sc & BCA ವಿದ್ಯಾರ್ಥಿಗಳಿಗೆ | * Graphics Design<br>* Data Analysis and Visualization |
| 3 | ಸ್ನಾತಕ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮಂಡಳಿ | BA & BSW ವಿದ್ಯಾರ್ಥಿಗಳಿಗೆ | * Media & Film Making<br>* Content & communication |

ಸದರಿ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಸಭಾ ನಡಾವಳಿಗಳನ್ನು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದ ಸಭೆ ಅನುಮೋದನೆಯ ಸ್ಥಿರೀಕರಣಕ್ಕೊಳಪಟ್ಟು ಉಲ್ಲೇಖ (04)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪರಿಷ್ಕರಿಸಿ ಅಧಿಸೂಚಿಸಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು

ಕುಲಸಚಿವರು

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು

ಗೆ

1. ಪ್ರಾಂಶುಪಾಲರು ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
2. ಪ್ರಾಂಶುಪಾಲರು ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.

ಗೌರವ ಪ್ರತಿಯನ್ನು:

1. ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಬೆಂಗಳೂರು.

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು– ವೆಬ್‌ಸೈಟ್‌ನಲ್ಲಿ ಇಂದೇ ಪ್ರಕಟಿಸುವುದು
5. ಕಛೇರಿ ಪ್ರತಿ.